

ಆಂಧ್ರದಲ್ಲಿ ಯುಗಾದಿಯನ್ನು ಸ್ವಾಗತಿಸುವ ಪರಿ...



ಬೇವು ಬೆಲ್ಲದ ಯುಗಾದಿ ಆಚರಣೆಗೆ ಕಂದಮ್ಮನಿಂದ ಚಾಲನೆ




ವಸಂತ ಬಂದ ಋತುಗಳ ರಾಜ...
ಬೆಂಗಳೂರಿನ ನಾಗರಬಾವಿ ಸಮೀಪ ಚೆಲುವೆಲ್ಲ ತನ್ನದೆನ್ನುತ್ತಿರುವ ತಬೂಬಿಯಾ ರೋಸಿಯಾ ಮರದ ಸೊಬಗು
ಫೋಟೊ: ಎಂ.ಎಸ್. ಮಂಜುನಾಥ್



ನಗೆಯ ಜುಗಲಬಂದಿ

ಹಲವು ರೂಪದಲ್ಲಿ ಮನುಷ್ಯ ಮನುಷ್ಯರ ನಡುವೆ ಗೆರೆ–ಗೋಡೆಗಳಾಗಿದೆ. ಈ ಎಲ್ಲ ತರತಮಗಳಿಂದ ಪಾರಾಗಲು ಇರುವುದೊಂದೇ ದಾರಿ – ಮಕ್ಕಳ ಲೋಕವನ್ನು ಪ್ರವೇಶಿಸುವುದು.

'ಮಕ್ಕಳ ಸಂಗದೊಳೆಚ್ಚರಗೊಳ್ಳಲಿ ಆನಂದದ ಆ ದಿವ್ಯಶಿಶು' ಎನ್ನುವ ಕುವೆಂಪು ಅವರ ಮಾತು, ನಮ್ಮ ನೆಮ್ಮದಿ ಇರುವುದೆಲ್ಲಿ ಎನ್ನುವುದನ್ನು ಸೂಚಿಸುವಂತಿದೆ. ಅಂದಹಾಗೆ, ಕಾಲನ ಕೈ ಹಿಡಿದು ಬಹುದೂರ ನಡೆದುಬಂದಿರುವ ನಾವು, ಮಕ್ಕಳ ಲೋಕಕ್ಕೆ ಮರಳುವುದು ಸಾಧ್ಯವೆ? ಈ ಜಿಜ್ಞಾಸೆಗೆ ಉತ್ತರವಾಗಿ, 'ಎಲ್ಲ ದೊಡ್ಡವರ ಹೃದಯದಲ್ಲಿ ನಿತ್ಯ ಕಿಶೋರತೆ ನಿದ್ರಿಸುತ್ತಿದೆ' ಎನ್ನುವ ಕುವೆಂಪು ಅವರ ಮಾತನ್ನೇ ನೆನಪಿಸಿಕೊಳ್ಳಬೇಕು. ನಾವೆಷ್ಟೇ 'ದೊಡ್ಡ'ವರಾದರೂ, ನಮ್ಮ ಹೃದಯದೊಳಗೆ 'ಮಗುತನ' ಇದ್ದೇಇದೆ. ನಾವು ಮಾಡಬೇಕಾದುದಿಷ್ಟೇ: ನಿದ್ರಿಸುತ್ತಿರುವ ಆ ಕಿಶೋರತೆಯನ್ನು ಎಚ್ಚರಿಸುವುದು. ಹಾಗೆ ಎಚ್ಚರಗೊಳಿಸುವುದಕ್ಕೆ ಒಂದು ಸುಂದರ ನೆಪ, ಪ್ರೇರಣೆ ಬೇಕಷ್ಟೆ. ಅಂಥದೊಂದು ಪ್ರೇರಣೆ, ಯುಗಾದಿ.

ಯುಗಾದಿ ಎನ್ನುವುದು ಬರಿಯ ಹಬ್ಬವಲ್ಲ; ಅದು ಯುಗದ ಹಾದಿಯೂ, ಹೊಸ ವರ್ಷದ ಆರಂಭವೂ ಹೌದು. ಈ ಸಂಧಿಕಾಲಕ್ಕೆ ಪ್ರಕೃತಿಯೂ ಹೊಸ ಉಡುಗೆಯನುಟ್ಟು ಸಂಭ್ರಮಿಸುತ್ತದೆ. ಯುಗಾದಿಯ ಜಾದೂ ಎಂಥದೆನ್ನುತ್ತೀರಿ: 'ಎಂಥ ಅನಿಮಿಯಾ ಕೊಂಬೆಯಲ್ಲು ಜೀವಸಂಚಾರ' ಎಂದು ಉದ್ಗರಿಸುತ್ತಾರೆ ಕವಿ ಜಿ.ಎಸ್. ಶಿವರುದ್ರಪ್ಪ. ಮುಂದುವರೆದು, ಕವಿ ಕಟ್ಟಿಕೊಡುವ ಯುಗಾದಿಯ ಚಿತ್ರ ಎಷ್ಟು ಮೋಹಕವಾಗಿದೆ ನೋಡಿ:

'ಎಲ್ಲೋ ಯಾರೋ ಒತ್ತಿದರು ಸ್ವಿಚ್ಚು/ ಇಲ್ಲಿ ಈ ಬೋಳು ಬಯಲಲ್ಲಿ/ ಹಠಾತ್ತನೆ ಮರಮರದ ಮೈಯಲ್ಲಿ/ ಹಳದಿ ಹೂವಿನ ಹುಚ್ಚು'.

ಪ್ರಕೃತಿಯಲ್ಲಿ ಜೀವಸಂಚಾರ ಉಂಟುಮಾಡುವ ಯುಗಾದಿಗೆ, ಮನುಷ್ಯಪ್ರಕೃತಿಯಲ್ಲಿ ಹೊಸ ಭರವಸೆ ತುಂಬುವುದು ಸಾಧ್ಯವಿಲ್ಲವೆ? ಖಂಡಿತಾ ಸಾಧ್ಯವಿದೆ. ನಾವು ಮನಸು ಮಾಡಬೇಕಿದೆ ಅಷ್ಟೇ.

ಯುಗಾದಿ ಬೇವು–ಬೆಲ್ಲದ ರೂಪಕ. ಮನೆಗೆ ತೋರಣ, ಅಡುಗೆಮನೆಯಲ್ಲಿ ಒಬ್ಬಟ್ಟಿನ ಹೂರಣ – ಇದು ಯುಗಾದಿ ಸಂಭ್ರಮ. ಎಣ್ಣೆ ಸ್ನಾನ, ಹೊಸಬಟ್ಟೆ, ಜೋಕಾಲಿ ಸಂಭ್ರಮವೂ ಹಬ್ಬಕ್ಕೆ ಜೊತೆಗೂಡುತ್ತವೆ. ಇವೆಲ್ಲವೂ ಪ್ರತಿವರ್ಷವೂ ಮರುಕಳಿಸುವಂತಹವು. ಈ ಆಚರಣೆಗಳನ್ನು ಯಾಂತ್ರಿಕವಾಗಿ ಆಚರಿಸಿದರೆ ಸಾಲದು, ಹಬ್ಬದ ಆಚರಣೆ ಸಾಂಗಗೊಳ್ಳಬೇಕಾದುದು ನಮ್ಮ ಮನಸ್ಸಿನಲ್ಲಿ.

ಮೈಗೆ ಹಚ್ಚಿಕೊಳ್ಳುವ ಎಣ್ಣೆ, ನಮ್ಮ ಮನಸ್ಸಿನ ಕಿಲುಬನ್ನು ತೊಳೆಯುವಂತಾಗಬೇಕು. ಬೇವು–ಬೆಲ್ಲದ ಔಷಧಿಗುಣ ಮನಸ್ಸಿನ ಜಾಡ್ಯಗಳಿಗೆ ಮದ್ದಾಗಬೇಕು. ಜೋಕಾಲಿ ಜೀಕುತ್ತಾ ಜೀಕುತ್ತಾ ಮಾನವೀಯತೆಯ ತಂತಿಗಳನ್ನೂ ಶ್ರುತಿ ಮಾಡಬೇಕು. ಹಬ್ಬದ ಸಿಹಿ ಸಮಾಜದ ರುಚಿ ಹೆಚ್ಚಿಸುವಂತಾಗಬೇಕು. ಆಗಗೊಡಲು ಬಂದಿದೆ ಶೋಭಾಕೃತ. ಆಗಗೊಡಬೇಕಾದುದು ನಮ್ಮ ಒಳಿತಿಗಾಗಿ ನಾವುಗಳೇ ನಿರ್ವಹಿಸಬೇಕಾದ ಕರ್ತವ್ಯ.

ಪ್ರತಿಕ್ರಿಯಿಸಿ: feedback@sudha.co.in